
ಕಲಾಭಿರುಚಿಯ ಕಲಾಕೌತುಕಗಳಲ್ಲಿ ಗಾಂಧೀಜಿಯೂ ಒಬ್ಬರಾಗಿದ್ದಾರೆ.

ಕರ್ನಾಟಕದ ಎಸ್.ಎನ್. ಸ್ವಾಮಿಯವರ ಪೆನ್ಸಿಲ್ ರಚನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಗಾಂಧಿಯ ಬದುಕಿನ ಪ್ರಮುಖ ಘಟ್ಟಗಳ ರೇಖಾಚಿತ್ರಗಳು (ಕಲಾವಿದ: ಎಂ.ಎಸ್. ಮೂರ್ತಿ) ಇವೆಲ್ಲ ಸ್ವೀಕೃತವಾಗಿರುವ ಗಾಂಧಿ ಬದುಕಿನ ಪ್ರಮುಖ ಘಟ್ಟಗಳ ಫಾರ್ಮಲ್ ಚಿತ್ರಗಳಾಗಿ ಆ ಘಟ್ಟಗಳನ್ನು ಗಟ್ಟಿಯಾಗಿ ಪುನರ್ ಪ್ರತಿಷ್ಠಾಪಿಸುತ್ತವೆ. ಚೋಳಮಂಡಲದ ಕೆ.ಎಂ. ಆದಿಮೂಲಂ ಅವರ ರೇಖಾಚಿತ್ರಗಳು ಇದೇ ಸಾಲಿಗೆ ಸೇರುತ್ತವೆ. ಮೊದಲು ಕಪ್ಪುಬಿಳುಪಿನ ಔಪಚಾರಿಕ ಛಾಯಾಚಿತ್ರಗಳು, ತದನಂತರ ಅವುಗಳನ್ನು ಆಧರಿಸಿದ ರೇಖಾಚಿತ್ರಗಳು ದೃಶ್ಯಕಲೆಯಲ್ಲಿ ಉತ್ಕರ್ಷಿಣಿ–ಅವಸರ್ಪಿಣಿಯ (ಡಿ.ಆರ್. ನಾಗರಾಜ್ ಅವರ ಪರಿಕಲ್ಪನೆಯ ಅನುಸಾರ) ಆಟಕ್ಕೆ ನಾಂದಿಯಾಡುತ್ತದೆ.

★★★

ಪ್ರಸ್ತುತ ಗಾಂಧಿಯ ಕಲಾತ್ಮಕ ನಿರೂಪಣೆಯು ಒಂದು ಉದ್ಯಮವಾಗಿದೆ. ರಾಜ್‌ಕುಮಾರ್, ಶಂಕರನಾಗ್, ಹನುಮಂತ ಮುಂತಾದವರ ನಡುವೆಯೇ ಗಾಂಧಿ ಭಾಷಾತೀತವಾಗಿ, ವರ್ಣಾತೀತವಾಗಿ, ಧರ್ಮಾತೀತವಾಗಿ ಇನ್ನೂ ಚಾಲ್ತಿಯಲ್ಲಿರುವ ತಾತ. ದೇಶದ ನಾಯಕರಿಂದ ಜನಸಾಮಾನ್ಯರವರೆಗೂ ಈ ರಾಷ್ಟ್ರಪಿತನ 'ದೃಶ್ಯ'ಗಳು, ರಸ್ತೆಬದಿಯ ಓಬಿರಾಯನ ಲಿಥೋಗ್ರಾಫ್‌ಗಳಿಂದ ಸಮಕಾಲೀನ ಜಾಲತಾಣಗಳ ಟ್ರಾಲಿಗರ ಕುಹುಕಗಳಿಗೂ ಆಪ್ಯಾಯಮಾನ ವಿಷಯವಾಗಿದ್ದಾರೆ. ಆದರೆ ದೃಶ್ಯಕಲೆಯಲ್ಲಿ ಮಾತ್ರ (ಗಾಂಧಿ ಸಿನಿಮಾಗಳ ಇತಿಹಾಸದಂತೆ) ಗಾಂಧಿ ಕೇವಲ ನಿರೂಪಗೊಳ್ಳದೆ, ಹಲವು ದಶಕಗಳಲ್ಲಿ ಹೇಗೆ ಗಾಂಧಿಯ ಗೋಚರಿಸುವಿಕೆಯು (ಅಪಿಯರೆನ್ಸ್) ದೇಶದ ರಾಜಕೀಯ ಚರಿತ್ರೆಯು ಮಾರ್ಪಾಡಾದಂತೆ ರೂಪಾಂತರ ಹೊಂದುತ್ತಾ ಬಂದಿದೆ ಎಂಬುದನ್ನೂ ಸಹ ನಿರೂಪಣೆಗೆ ಒಡ್ಡಿಬಿಟ್ಟಿದೆ. ಇದಕ್ಕೆ ಒಂದು ಸರಳ ಉದಾಹರಣೆಯನ್ನು ಗಮನಿಸಿ ('ಸರಳ'ತೆಯನ್ನು ಸಂಕೀರ್ಣಗೊಳಿಸಿ, ಸಹಜತೆಯಿಂದ ಅದು ಭಿನ್ನ ಎಂದು ಹೇಳಿಕೊಟ್ಟು ಮಕ್ಕಳಿಗೆ ಮಾದರಿಯಾದವರು ಗಾಂಧೀ ತಾತಾ):

ಚಿತ್ರ ಮತ್ತು ದೃಶ್ಯವಾಗಿ ಗಾಂಧೀಜಿಯವರು ಸರಳವಾಗಿ ಸಹಜವಾಗಿ, 'ಪಾಪು ಗಾಂಧಿ ಬಾಪು ಗಾಂಧಿ'ಯಾಗಿ ಹೊರಮೊಮ್ಮಿದ್ದಾರೆ. 'ನನ್ನ ಬದುಕೇ ನನ್ನ ಸಂದೇಶ' ಎಂಬ ಪದಗಳ ಸಮೂಹವಾಗಿದ್ದಾರೆ, ಕೆಟ್ಟದ್ದನ್ನು ಕೇಳಲಾರೆ, ನೋಡಲಾರೆ, ಆಡಲಾರೆ ಎಂಬ ಪೂರ್ವಜರ ಮೂರು ಆಕಾರಗಳಾಗಿ ಹೊಮ್ಮಿದ್ದಾರೆ; ಸುಲಭಕ್ಕೆ ಎಲ್ಲರೂ ಒಗ್ಗಿಕೊಳ್ಳಬಹುದಾದ ಗಾಂಧಿ ಕ್ಲಾಸಾಗಿ/ವರ್ಗವಾಗಿ ರಸ್ತೆಗಿಳಿದಿದ್ದಾರೆ. ಅತಿಸಂಕ್ಷಿಪ್ತ ರೇಖೆಗಳಲ್ಲಿ ಮೂಡಿಬರುವ ರೇಖಾತ್ಮಕ ವ್ಯಕ್ತಿತ್ವವಾಗಿದ್ದಾರೆ; ಅವರ ಕಪ್ಪುಬಿಳುಪಿನ ಛಾಯಾಚಿತ್ರಗಳನ್ನು ಡಿಜಿಟಲಿನಲ್ಲಿಯೂ ಉತ್ತಮಪಡಿಸಲಾಗದಿರುವಾಗ, ಕಲಾವಿದರು ಅವುಗಳನ್ನು ಆಧರಿಸಿ ಅವರನ್ನು ವರ್ಣಮಯಗೊಳಿಸಿರುವಾಗ, 20ನೇ ಶತಮಾನದ ವಾಲ್ಟರ್ ಬೆಂಜಮಿನ್ನನ ಪುನರಾವರ್ತನೆಯ ದೃಶ್ಯ ತತ್ತ್ವಗಳಿಗೆ ಅತ್ಯುತ್ತಮವಾಗಿ ಒದಗಿಬಂದಿರುವ ಎರಡೇ ಎರಡು ಆಕಾರಗಳಿವೆ: ಅವುಗಳಲ್ಲಿ ಮೊದಲನೆಯದು ಒಂದು ಅಸಲಿ ಕಲಾಕೃತಿ: ಮೊನಾಲಿಸಾ. ಎಲ್ಲ ಆಧುನಿಕ ಪೂರ್ವ ಕಲಾಪುಸ್ತಕಗಳ ಸಂಗ್ರಹಾಲಯದ ಪ್ರಕಟಣೆಗಳಿಗೆ ಮುಖಪುಟವಾಗಿರುವಾಕೆ




ಮಹಾತ್ಮ ಗಾಂಧಿ ಭಿತ್ತಿಚಿತ್ರ